ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ ಖಾನಾಪೂರ
ಸಿ.ಸಿ.ನಂಃ 822/2014

ಸಿ.ಡಬ್ಲೂ **3**

ಪಿ.ಡಬ್ಲೂ **2**

| | | |
|---|---|---|
| ಸಾಕ್ಷಿಯ ಹೆಸರು | : | ರವಿ ಮಲ್ಲಪ್ಪಾ ಮುರಗೋಡ |
| ವಯಸ್ಸು | : | **49** ವರ್ಷ |
| ಉದ್ಯೋಗ | : | ಅಬಕಾರಿ ಉಪ ಅಧೀಕ್ಷಕ **,** ಬೆಳಗಾವಿ ಉಪ ವಿಭಾಗ**,** ಬೆಳಗಾವಿ**.** |
| ವಾಸ್ತವ್ಯ | : | ಬೆಳಗಾವಿ**.** |

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋದಿಸಲಾಯಿತುಃ ದಿನಾಂಕ 16-06-2025.

ಮುಖ್ಯ ವಿಚಾರಣೆಃ ಸರ್ಕಾರಿ ವಕೀಲರಿಂದಃ-

ನಾನು 2011 ರಿಂದ 2014 ರವರೆಗೆ ಅಬಕಾರಿ ನಿರೀಕ್ಷಕ ಖಾನಾಪೂರವಲಯ ಅಂತಾ ಕೆಲಸ ನಿರ್ವಹಿಸಿರುತ್ತೇನೆ.

ದಿಃ 02.09.2013 ರಂದು ನಾನು ಮತ್ತು ನಮ್ಮ ಸಿಬ್ಬಂದಿ ಬೆಳಗಗ್ಗೆ 03.00 ಗಂಟೆಯಿಂದ ಬೆಳಗಾವಿ ಖಾನಾಪೂರ ರಸ್ತೆಯಲ್ಲಿ, ರಸ್ತೆಗಾವಲು ಮಾಡುತ್ತಿದಾಗ, 03.10 ಗಂಟೆಗೆ ನಮಗೆ ಕಾಟಗಾಳಿ ಕಡೆಯಿಂದ ಒಬ್ಬ ದ್ವಿಚಕ್ರವಾಹನದ ಚಾಲಕನು ಟ್ಯೂಬ ಮೂಲಕ ಕಳ್ಳಬಟ್ಟಿ ಸರಾಯಿಯನ್ನು ಸಾಗಿಸುತ್ತಿದ್ದಾನೆ ಎಂದು ಬಾತ್ಮಿ ಬಂದಿತು. ಕೂಡಲೇ ನಾವು ಕಾಟಗಾಳಿ ರಸ್ತೆಗೆ ಹೋಗಿ ನಿಂತೇವು. 03.30 ಗಂಟೆ ಸಮಾರಿಗೆ ಒಬ್ಬ ದ್ವಿಚಕ್ರ ವಾಹನದಲ್ಲಿ ಬರುವುದು ಕಂಡು ಬಂದಿತು. ನಾವು ಆತನನ್ನು ನಿಲ್ಲಿಸಲು ಪ್ರಯತ್ನಿಸಿದೇವು. ಆತ ನಮ್ಮನ್ನು ನೋಡಿ ದ್ವಿಚಕ್ರ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು. ನಾವು ಕೂಡಲೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು, ವಾಹನ ಹಾಗೂ ಟ್ಯೂಬನ್ನು ತಪಾಸಣೆ ಮಾಡಿದೇವು. ಸದರಿ ಶೋಧನಾ ಸಮುಚಿತವನ್ನು ನಿಪಿ-2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಮ್ಮ ಸಿಬ್ಬಂದಿ ಆತನನ್ನು ಹಿಡಿಯಲು ಪ್ರಯತ್ನ ಪಟ್ಟರೂ ಆತನು ಸಿಗಲಿಲ್ಲ. ಸದರಿ ದ್ವಿಚಕ್ರ ವಾಹನವು ಸುಜುಕಿ ಕಂಪನಿಗೆ ಸೇರಿದ್ದು ಆಗಿದ್ದು, ಅದರ ನೊಂದಣಿ ಸಂಖ್ಯೇ ಕೆಎ-22/ಎಸ್-7003 ಆಗಿತ್ತು. ಸದರಿ ಬೈಕನಲ್ಲಿ ಒಟ್ಟು ನಾಲ್ಕು ಟ್ಯೂಬಗಳು ಇದ್ದವು, ನಾವು ಸದರಿ ಟ್ಯೂಬನ್ನು ಪರಿಶೀಲಿಸಿದಾಗ ನಮಗೆ ಗಾಟ ವಾಸನೆ ಬಂದಿತ್ತು, ಕೂಡಲೇ ನಮಗೆ ಸದರಿ

ಟ್ಯೂಬನಲ್ಲಿ ಕಳ್ಳಬಟ್ಟಿ ಇರುವುದು ಖಚಿತವಾಯಿತು. ಒಂದೊಂದು ಟ್ಯೂಬನಲ್ಲಿ ಒಟ್ಟು 20 ಲೀಟರ್ ಕಳ್ಳಬಟ್ಟಿ ಸರಾಯಿ ಇತ್ತು, ಅದರಲ್ಲಿ ಒಂದು ಟ್ಯೂಬನಿಂದ 180 ಎಂಎಲ್‌ನಷ್ಟು ಸ್ಯಾಂಪಲಗಾಗಿ ತೆಗೆದುಕೊಂಡು ಸೀಲ ಮಾಡಿ , ನಮ್ಮ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿದೇವು. ನಾಲ್ಕು ಟ್ಯೂಬಗಳನ್ನು ಹಾಗೂ ಬೈಕನ್ನು ವಶಕ್ಕೆ ತೆಗೆದುಕೊಂಡು, ಪಂಚನಾಮೆಯನ್ನು 03.45 ರಿಂದ 05.00 ಗಂಟೆವರೆಗೆ ಜರುಗಿಸಿದೇವು. ನಂತರ ಕಚೇರಿಗೆ ಬಂದು ನಾನು ಸರ್ಕಾರ ತರ್ಫೆ ಪಿರ್ಯಾದಿಯನ್ನು ನೀಡಿ, ಪ್ರವವಯನ್ನು ದಾಖಲಿಸಿಕೊಂಡೆನು. ಪಿರ್ಯಾದಿಯನ್ನು ನಿಪಿ-3 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-3(ಎ) ಎಂದು, ಪ್ರವವಯನ್ನು ನಿಪಿ-4 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-4(ಎ)ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರರಿಗೆ ಮುದ್ದೆ ಮಾಲನ್ನು ತೋರಿಸಲಾಗಿ ಗುರುತಿಸಿದ್ದು, ಮು. ಮಾ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ

ಆರೋಪಿ ತಲೆಮರೆಸಿಕೊಂಡಿದ್ದು, ಯಾವುದೇ ಪಾಟೀ ಸವಾಲು ರುವುದಿಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಖಾನಾಪೂರ.